ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 26ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ:17-12-2021ರಂದು ಶುಕ್ರವಾರ,
ಸಂಜೆ 4.00 ಗಂಟೆಗೆ

ಸ್ಥಳ :

ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ,
ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು .

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 26ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 26ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:17-12-2021ರಂದು ಶುಕ್ರವಾರ ಸಂಜೆ 4.00 ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** | **ಹಾಜರಿದ್ದ ಸದಸ್ಯರ ಸಂಖ್ಯೆ: 09**

| | | | |
|---|---|---|---|
| 1 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,<br>ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,<br>6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ<br>(Zoom Meeting) |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,<br>ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು,<br>ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,<br>6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುವುದಿಲ್ಲ |
| 5 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ<br>(Zoom Meeting) |
| 6 | ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಸಲಹೆಗಾರರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ<br>ಕಾರ್ಯದರ್ಶಿ | ಹಾಜರಿರುತ್ತಾರೆ |

Finance Officer
Hassan Institute of Medical Sciences

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ:01

**ವಿಷಯ: ದಿನಾಂಕ:23-06-2021ರಂದು ನಡೆದ 25ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ.**

*-*-*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 25ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರುವರ ಅಧ್ಯಕ್ಷತೆಯಲ್ಲಿ ದಿನಾಂಕ:23-06-2021 ರಂದು ನೆರವೇರಿದ್ದು, ಸದರಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಸಂಸ್ಥೆಯಿಂದ ವಹಿಸಿರುವ ಕ್ರಮಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವ ಬಗ್ಗೆ ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು. ಈ ಪೈಕಿ

**ತೀರ್ಮಾನ:**

**ದಿನಾಂಕ:23-06-2021ರಂದು ನಡೆದ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 03(11)ರಲ್ಲಿ** ರೇಡಿಯಾಲಜಿ ವಿಭಾಗಕ್ಕೆ ರೂ.80.00 ಲಕ್ಷಗಳ ವೆಚ್ಚದಲ್ಲಿ High end ultra sound Scanner ಉಪಕರಣಗಳ ಸರಬರಾಜಿಗೆ, ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದ ಮನವಿ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಉಪಕರಣದ ಬೆಲೆಯು ಅಧಿಕವೆಂದು ಕಂಡು ಬರುತ್ತಿದ್ದು ಮತ್ತು High end ultra sound Scanner ಉಪಕರಣವು ಎನ್.ಎಮ್.ಸಿ. ನಿಯಮಾನುಸಾರ ಅವಶ್ಯಕತೆ ಇಲ್ಲದೆ ಇರುವುದರಿಂದ ಮತ್ತು ಪ್ರಸ್ತುತ ಸಂಸ್ಥೆಯಲ್ಲಿ ಲಭ್ಯವಿರುವ Ultra sound scanner ನಿಂದಲೇ ದೈನಂದಿನ ಅವಶ್ಯಕತೆ ಪೂರೈಕೆಯಾಗುತ್ತಿರುವುರಿಂದ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸುವುದೆಂದು ತೀರ್ಮಾನಿಸಲಾಯಿತು. ಅಧಿಕ ಬೆಲೆಯ ಉಪಕರಣವನ್ನು ಖರೀದಿಸಲು ಮನವಿ ನೀಡಲು ಕಾರಣವೇನು ಎಂಬುದಕ್ಕೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರಿಗೆ ನೋಟೀಸ್ ನೀಡಿ ಸಮಜಾಯಿಷಿ ಪಡೆಯುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. ಮತ್ತು ಅಧಿಕ ಬೆಲೆಯ ಉಪಕರಣದ ಖರೀದಿ ಪ್ರಸ್ತಾವನೆಯನ್ನು ಸಲ್ಲಿಸಿರುವ ವಿಭಾಗ ಮುಖ್ಯಸ್ಥರ ಕ್ರಮದ ಬಗ್ಗೆ ಇಬ್ಬರು ರೇಡಿಯಾಲಜಿಸ್ಟ್‌ಗಳನ್ನೊಳಗೊಂಡ ಮಾನ್ಯ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಸಮಿತಿಯಿಂದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶಿಸಲಾಯಿತು.

**ದಿನಾಂಕ:23-06-2021ರಂದು ನಡೆದ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 03(13)**ರಲ್ಲಿ ಆಸ್ಪತ್ರೆ ಕಟ್ಟಡಗಳಿಗೆ Fire protection system ಅಳವಡಿಸಿಕೊಳ್ಳಲು ತಗಲುವ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಪಾವತಿಸಲು ಹಾಗೂ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಪಡೆಯಲು ಸರ್ಕಾರಕ್ಕೆ ಬರೆದಿರುವ ಪತ್ರದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸದರಿ ವ್ಯವಸ್ಥೆಯನ್ನು ಅತ್ಯವಶ್ಯಕವಾಗಿ ಮಾಡಬೇಕಾಗಿರುವುದರಿಂದ ಎ, ಬಿ, ನರ್ಸಿಂಗ್ ಕ್ವಾರ್ಟರ್ಸ್‌ಗಳ ಕಾಮಗಾರಿಯಲ್ಲಿ ಉಳಿತಾಯವಾಗುವ



Finance Officer

ಅಂದಾಜು ಮೊತ್ತ ರೂ.250 ಲಕ್ಷಗಳ ಮೊತ್ತವನ್ನು ಅನಿವಾರ್ಯತೆ ಬಂದಲ್ಲಿ Fire protection system ಅಳವಡಿಸಿಕೊಳ್ಳಲು ಮತ್ತು ಉಳಿಕೆ ಮೊತ್ತವನ್ನು ಎ.ಆರ್.ಎಸ್. ನಿಧಿಯಿಂದ ಬಳಸಿಕೊಳ್ಳಲು ನಿರ್ದೇಶಿಸಲಾಯಿತು.

**ದಿನಾಂಕ:23–06–2021ರಂದು ನಡೆದ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 08(1)** ರಲ್ಲಿ ಆಕುಕ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವಿಲೀನಗೊಂಡಿರುವ ವೈದ್ಯರುಗಳಿಗೆ ಕಾಲಮಿತಿ ವೇತನ ಪದೋನ್ನತಿಯನ್ನು ಪುನರ್ ಸ್ಥಾಪಿಸಿ ಹಿಂಬಾಕಿ ಮಂಜೂರು ಮಾಡುವ ಬಗ್ಗೆ ಅನುಮತಿಗಾಗಿ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ ಚರ್ಚಿಸಲಾಯಿತು. ಸದರಿ ವೈದ್ಯರುಗಳಿಗೆ ಹಿಂಬಾಕಿ ಪಾವತಿ ಮಾಡುವ ಬಗ್ಗೆ ನಿಖರವಾಗಿ ಲೆಕ್ಕೀಕರಿಸಿ, ನಿಯಮಾನುಸಾರವಿದ್ದಲ್ಲಿ ಮತ್ತು ಈ ನಿಟ್ಟಿನಲ್ಲಿ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿಗಳು ವಿವರವಾಗಿ ಪರಿಶೀಲಿಸಿ ದೃಢೀಕರಿಸಿದಲ್ಲಿ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ದಿನಾಂಕ:23–06–2021ರಂದು ನಡೆದ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 08(3)** ಆರ್ಥಿಕ ಸಲಹೆಗಾರರ ಹುದ್ದೆಗೆ ನೀಡುತ್ತಿರುವ ಮಾಸಿಕ ಕ್ರೋಢೀಕೃತ ವೇತನವನ್ನು ರೂ.50,000–00 ದಿಂದ ರೂ.70,0000–00ವರೆಗೆ ನಿಗದಿ ಮಾಡುವ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ಸದರಿಯವರ ಸೇವೆಯನ್ನು ಮತ್ತೊಂದು ಅವಧಿಗೆ ವಿಸ್ತರಿಸುವುದೆಂದು ತೀರ್ಮಾನಿಸಿ ವ್ಯತ್ಯಾಸದ ಬಾಬ್ತನ್ನು ಪಾವತಿಸುವ ಬಗ್ಗೆ, ಸರ್ಕಾರಕ್ಕೆ ಈಗಾಗಲೇ ಕಡತ ಸಲ್ಲಿಕೆಯಾಗಿರುವುದರಿಂದ ಕಡತವನ್ನು ಪರಿಶೀಲಿಸಲಾಗುವುದೆಂದು ತೀರ್ಮಾನಿಸಲಾಯಿತು.

**ದಿನಾಂಕ:23–06–2021ರಂದು ನಡೆದ ಆರ್ಥಿಕ ಸಮಿತಿ ಸಭೆಯ ಅಜೆಂಡಾ ಕ್ರಮ ಸಂಖ್ಯೆ: 09(01)** ಕ್ಯಾನ್ಸರ್ ವಿಭಾಗವನ್ನು ಮೇಲ್ದರ್ಜೆಗೇರಿಸುವ ಸಂಬಂಧ ಹೊಸ ಹುದ್ದೆಗಳ ಸೃಜಿಸುವ ಕುರಿತು. ಸರ್ಕಾರಕ್ಕೆ ಏಕ ಕಡತದಲ್ಲಿ ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದರಿ ಚಿಕಿತ್ಸೆಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳು ಪೂರ್ಣಗೊಳ್ಳದಿರುವುದರಿಂದ ಸದರಿ ಕಾಮಗಾರಿಗಳು ಪೂರ್ಣಗೊಂಡು ಕಾರ್ಯರೂಪಕ್ಕೆ ಬಂದ ನಂತರ ಹೊಸ ಹುದ್ದೆಗಳ ಸೃಜನೆಗೆ ಕ್ರಮವಹಿಸಲು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 02

**ವಿಷಯ: 2021–22ನೇ ಸಾಲಿನಲ್ಲಿ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶೆ.**

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರದಿಂದ 2021–22ನೇ ಸಾಲಿಗೆ ವಿವಿಧ ಲೆಕ್ಕ–ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನ, ಸದರಿ ಅನುದಾನದಲ್ಲಿ ಮಾಡಲಾಗಿರುವ ವೆಚ್ಚದ ವಿವರ ಮತ್ತು ಬ್ಯಾಂಕ್ ಖಾತೆಗಳಲ್ಲಿ ಲಭ್ಯವಿರುವ ಅನುದಾನದ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ವಿಮರ್ಶಿಸಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಸಂಸ್ಥೆಗೆ ಸರ್ಕಾರದಿಂದ 2021–22ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ ಬಿಡುಗಡೆಯಾಗಿರುವ ಅನುದಾನ ಮತ್ತು ವೆಚ್ಚಗಳು ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಮೊತ್ತ ಹಾಗೂ ಎ.ಆರ್.ಎಸ್. ನಿಧಿಯಿಂದ ಸಂಗ್ರಹವಾಗಿರುವ ಶುಲ್ಕ ಮತ್ತು ಖರ್ಚು ವೆಚ್ಚಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಒಪ್ಪಿ ಅನುಮೋದಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 03

**ವಿಷಯ: ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2020-21ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು M/s. Harish Gowda & Co, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಸಲ್ಲಿಸಿದ್ದು ಸದರಿ ಆಡಿಟ್ ವರದಿಯನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.**

*-*-*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಹಾಸನ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹೊಳೆನರಸೀಪುರ ಮತ್ತು ವಿದ್ಯಾರ್ಥಿ ವಸತಿ ನಿಲಯಗಳ 2020-21ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಸಂಸ್ಥೆಯಿಂದ ನೇಮಕ ಮಾಡಿರುವ ಶ್ರೀ. **M/s. Harish Gowda & Co,** ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಪೂರ್ಣಗೊಳಿಸಿ ಲೆಕ್ಕ-ಪರಿಶೋಧನಾ ವರದಿಯನ್ನು ಸಲ್ಲಿಸಿದ್ದು, ಸದರಿ ಸಾಲಿನ ಆಡಿಟ್ ವರದಿಯನ್ನು ಆರ್ಥಿಕ ಸಮಿತಿ ಸಭೆಯಿಂದ ಅನುಮೋದನೆ ಪಡೆದು ನಂತರ ಸಂಸ್ಥೆಯ ವಾರ್ಷಿಕ ಮಹಾ ಸಭೆಯಲ್ಲಿ ಅನುಮೋದನೆ ಪಡೆಯಬೇಕಾಗಿರುತ್ತದೆಂಬ ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಶ್ರೀ.M/s. Harish Gowda & Co, ಚಾರ್ಟರ್ಡ್ ಅಕೌಂಟೆಂಟ್, ಹಾಸನ ಇವರು ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆ, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಹಾಸನ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಹೊಳೆನರಸೀಪುರ ಮತ್ತು ವಿದ್ಯಾರ್ಥಿ ವಸತಿ ನಿಲಯಗಳ 2020-21ನೇ ಸಾಲಿನ ಲೆಕ್ಕ-ಪರಿಶೋಧನೆಯನ್ನು ಪೂರ್ಣಗೊಳಿಸಿ ಸಲ್ಲಿಸಿದ್ದ ಲೆಕ್ಕ-ಪರಿಶೋಧನಾ ವರದಿಯನ್ನು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಒಪ್ಪಿ ಅನುಮೋದಿಸಲಾಯಿತು.

Finance Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 04

**ವಿಷಯ: 2013–2014ನೇ ಸಾಲಿನಿಂದ2019–20ನೇ ಸಾಲಿನವರೆಗಿನ ಸಂಸ್ಥೆಯ ನೊಂದಣಿ ನವೀಕರಣ ಶುಲ್ಕ ರೂ.58.21 ಲಕ್ಷಗಳನ್ನು ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಪಾವತಿಸಿರುವುದನ್ನು ಅನುಮೋದಿಸುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2013–2014ನೇ ಸಾಲಿನಿಂದ 2019–20ನೇ ಸಾಲಿನವರೆಗಿನ ಸಂಸ್ಥೆಯ ನೊಂದಣಿ ನವೀಕರಣ ಸಂಬಂಧ ಪಾವತಿಸಬೇಕಾದ ಶುಲ್ಕ ರೂ.58,20,949.00ಗಳನ್ನು (ರೂ.ಐವತ್ತೆಂಟು ಲಕ್ಷದ ಇಪ್ಪತ್ತು ಸಾವಿರದ ಒಂಬೈನೂರ ನಲವತ್ತೊಂಬತ್ತು ರೂಪಾಯಿಗಳು ಮಾತ್ರ) ಸಹಕಾರ ಸಂಘಗಳ ಉಪನಿಬಂಧಕರು, ಹಾಸನ ಜಿಲ್ಲೆ, ಹಾಸನ ಇವರ ನಿರ್ದೇಶನದಂತೆ ಲೆಕ್ಕಶೀರ್ಷಿಕೆ 0425–00–800–0–08–000 ಖಾತೆಗೆ ದಿನಾಂಕ:11–08–2021ರಂದು ಸರ್ಕಾರದ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಪಾವತಿಸಿರುವುದನ್ನು ಅನುಮೋದನೆಗಾಗಿ ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2013–2014ನೇ ಸಾಲಿನಿಂದ 2019–20ನೇ ಸಾಲಿನವರೆಗಿನ ಸಂಸ್ಥೆಯ ನೊಂದಣಿ ನವೀಕರಣ ಸಂಬಂಧ ನಿಯಮಾನುಸಾರ ಪಾವತಿಸಬೇಕಾದ ಶುಲ್ಕ ರೂ.58,20,949.00ಗಳನ್ನು (ರೂ.ಐವತ್ತೆಂಟು ಲಕ್ಷದ ಇಪ್ಪತ್ತು ಸಾವಿರದ ಒಂಬೈನೂರ ನಲವತ್ತೊಂಬತ್ತು ರೂಪಾಯಿಗಳು ಮಾತ್ರ) ಸಹಕಾರ ಸಂಘಗಳ ಉಪನಿಬಂಧಕರು, ಹಾಸನ ಜಿಲ್ಲೆ, ಹಾಸನ ಇವರ ನಿರ್ದೇಶನದಂತೆ ಲೆಕ್ಕಶೀರ್ಷಿಕೆ 0425–00–800–0–08–000 ಖಾತೆಗೆ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಣೆ ಮೇರೆಗೆ ಲೆಕ್ಕ ಶೀರ್ಷಿಕೆ 2210(103)ರಡಿಯಲ್ಲಿ ಪಾವತಿಸಿರುವುದನ್ನು ಒಪ್ಪಿ ಅನುಮೋದಿಸಲಾಯಿತು.

ನಿರ್ದೇಶಕರು

Finance Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 05

**ವಿಷಯ: ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಂಬಿಬಿಎಸ್ ಮತ್ತು ಪಿ.ಜಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಮತ್ತು ಲ್ಯಾಪ್‌ಟಾಪ್, ಪ್ರಿಂಟರ್‌ಗಳನ್ನು ಇ- ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.**

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 241 ಎಂಎಂಸಿ 2020, ದಿನಾಂಕ:30-04-2021 ಲೆಕ್ಕ ಶೀರ್ಷಿಕೆ 2210-05-105-1-49-423 ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ.
2. ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 241 ಎಂಎಂಸಿ 2020, ದಿನಾಂಕ:07-08-2021 ಲೆಕ್ಕ ಶೀರ್ಷಿಕೆ 2210-05-105-1-49-422 ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ.
3. ಟೆಂಡರ್ ಅಧಿಸೂಚನೆ ಸಂಖ್ಯೆ: :ಹಿಮ್ಸ್/ಲೆ.ಪ(3)/01/2021-22, ದಿನಾಂಕ:06.10.2021

*-*-*

**<u>ಪ್ರಸ್ತಾವನೆ:</u>**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಂಬಿಬಿಎಸ್ ಮತ್ತು ಪಿ.ಜಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ವೈದ್ಯಕೀಯ ಪುಸ್ತಕಗಳನ್ನು ಮತ್ತು ಲ್ಯಾಪ್‌ಟಾಪ್‌ಗಳನ್ನು ಒದಗಿಸಲು ಸರ್ಕಾರದ ಆದೇಶದಂತೆ 2021-22ನೇ ಸಾಲಿಗೆ ಎಸ್.ಸಿ.ಪಿ ಯಡಿ- ರೂ.127.00 ಲಕ್ಷಗಳು ಮತ್ತು ಟಿ.ಎಸ್.ಪಿಯಡಿ - ರೂ.63.00 ಲಕ್ಷಗಳು ಸೇರಿ ಒಟ್ಟು ರೂ.190.00 ಲಕ್ಷಗಳ ಅನುದಾನವು ನಿಗದಿಯಾಗಿರುತ್ತದೆ. ಇದರಲ್ಲಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಅನುದಾನವಾಗಿ ಎಸ್.ಸಿ.ಪಿ ಯೋಜನೆಯಡಿ ರೂ.63.50 ಲಕ್ಷಗಳು ಮತ್ತು ಟಿ.ಎಸ್.ಪಿ ಯೋಜನೆಯಡಿ ರೂ. 31.50 ಲಕ್ಷಗಳು ಸೇರಿ ಒಟ್ಟು ರೂ. 95.00 ಲಕ್ಷಗಳು ಬಿಡುಗಡೆಯಾಗಿರುತ್ತದೆ

ಸರ್ಕಾರದ ಆದೇಶದನ್ವಯ ವೈದ್ಯಕೀಯ ಪುಸ್ತಕ, ಲ್ಯಾಪ್‌ಟಾಪ್‌ಗಳು, ಮತ್ತು ಪ್ರಿಂಟರ್‌ಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆದು ವಿದ್ಯಾರ್ಥಿಗಳಿಗೆ ವಿತರಿಸಲು, ಇ-ಟೆಂಡರ್ ಆಹ್ವಾನಿಸಿದ್ದು, ರೂ.18.50.ಲಕ್ಷಗಳ ವೆಚ್ಚದಲ್ಲಿ 26 ಲ್ಯಾಪ್‌ಟಾಪ್‌ಗಳು ಮತ್ತು 26 ಪ್ರಿಂಟರ್‌ಗಳು ಹಾಗೂ ರೂ.18.00 ಲಕ್ಷಗಳ ವೆಚ್ಚದಲ್ಲಿ ವೈದ್ಯಕೀಯ ಪುಸ್ತಕಗಳು ಸೇರಿದಂತೆ ಒಟ್ಟು ಅಂದಾಜು ಮೊತ್ತ ರೂ.36.50 ಲಕ್ಷಗಳಿಗೆ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಆಹ್ವಾನಿಸಲಾಗಿದ್ದು, ತಾಂತ್ರಿಕ ಲಕೋಟೆ ತೆರೆಯಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಲು ಮತ್ತು ಸದರಿ ವೆಚ್ಚವನ್ನು ಎಸ್.ಸಿ.ಪಿ/ಟಿ.ಎಸ್.ಪಿ

ನಿರ್ದೇಶಕರು

Finance Officer

ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸಲು ಅನುಮೋದನೆಗಾಗಿ ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರದ ಆದೇಶದನ್ವಯ ಎಂಬಿಬಿಎಸ್ ಮತ್ತು ಪಿ.ಜಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ವೈದ್ಯಕೀಯ ಪುಸ್ತಕ, ಲ್ಯಾಪ್‌ಟಾಪ್‌ಗಳು, ಮತ್ತು ಪ್ರಿಂಟರ್‌ಗಳನ್ನು ವಿತರಿಸಲು, ರೂ.18.50.ಲಕ್ಷಗಳ ವೆಚ್ಚದಲ್ಲಿ 26 ಲ್ಯಾಪ್‌ಟಾಪ್‌ಗಳು ಮತ್ತು 26 ಪ್ರಿಂಟರ್‌ಗಳು ಹಾಗೂ ರೂ.18.00 ಲಕ್ಷಗಳ ವೆಚ್ಚದಲ್ಲಿ ವೈದ್ಯಕೀಯ ಪುಸ್ತಕಗಳು ಸೇರಿದಂತೆ ಒಟ್ಟು ಅಂದಾಜು ರೂ.36.50 ಲಕ್ಷಗಳಿಗೆ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ–ಟೆಂಡರ್ ಆಹ್ವಾನಿಸಿರುವುದನ್ನು ಒಪ್ಪಿ ಅನುಮೋದಿಸಲಾಯಿತು. ಹಾಗೂ ಸದರಿ ವೆಚ್ಚವನ್ನು ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಭರಿಸುವುದೆಂದು ತೀರ್ಮಾನಿಸಿ ಮುಂದಿನ ಸಾಲಿನಲ್ಲಿಯೂ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ವಿಳಂಬಕ್ಕೆ ಅವಕಾಶ ನೀಡದೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 06

**ವಿಷಯ: ಸಂಸ್ಥೆಯ ಬೋಧಕ ಆಸ್ಪತ್ರೆಯ ಡಯಾಲಿಸಿಸ್ ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.**

*-*-*

ಪ್ರಸ್ತಾವನೆ:

ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ವಿಭಾಗದಲ್ಲಿ 2009-10ನೇ ಸಾಲಿನಲ್ಲಿ 10 ಡಯಾಲಿಸಿಸ್ ಉಪಕರಣಗಳು, 2018ನೇ ಸಾಲಿನಲ್ಲಿ 06 ಡಯಾಲಿಸಿಸ್ ಉಪಕರಣಗಳು ಹಾಗೂ ಪಿ.ಎಮ್ ಕೇರ್‌ವತಿಯಿಂದ 02 ಡಯಾಲಿಸಿಸ್ ಉಪಕರಣಗಳು ಸೇರಿದಂತೆ ಒಟ್ಟು 18 ಡಯಾಲಿಸಿಸ್ ಉಪಕರಣಗಳು ಇರುತ್ತದೆ. 2009-2010ನೇ ಸಾಲಿನಲ್ಲಿ ಖರೀದಿಸಲಾಗಿದ್ದ ಡಯಾಲಿಸಿಸ್ ಉಪಕರಣಗಳು ಪದೇ ಪದೇ ರಿಪೇರಿಗೆ ಬರುತ್ತಿರುವುದರಿಂದ ದುರಸ್ಥಿ ವೆಚ್ಚವು ಅಧಿವಾಗಿರುತ್ತದೆ. ಸದರಿ ವಿಭಾಗಕ್ಕೆ ಬರುತ್ತಿರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ 10 ಡಯಾಲಿಸಿಸ್ ಉಪಕರಣಗಳು ಮತ್ತು ಅದಕ್ಕೆ ಸಂಬಂಧಿಸಿದ ಬಿಡಿಭಾಗಗಳನ್ನು ಸರಬರಾಜು ಮಾಡಿಕೊಡಬೇಕೆಂದು ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿರುತ್ತಾರೆ.

ಡಯಾಲಿಸಿಸ್ ವಿಭಾಗಕ್ಕೆ ಅಗತ್ಯವಿರುವ ಉಪಕರಣಗಳು ಮತ್ತು ಬಿಡಿಭಾಗಗಳ ಅಂದಾಜು ವೆಚ್ಚ ರೂ. 1,21,05,000-00ಗಳಾಗಿದ್ದು, ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49(103) / ಯೂಸರ್ಸ್ ನಿಧಿ ಅಡಿಯಲ್ಲಿ ಭರಿಸುವ ಬಗ್ಗೆ ಹಾಗೂ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl no | Details | Rate per Unit | Quantity | Total Rs. |
|---|---|---|---|---|
| 1 | Dialysis Department | 800000.00 | 10 Nos | 8000000.00 |
| 2 | R.O Plant 2000 Liter capacity | 1000000.00 | 01 Nos. | 1000000.00 |
| 3 | Dialysis Plastients chair | 100000.00 | 05 Nos. | 500000.00 |
| 4 | Online UPS 30 KVA | 800000.00 | 01 No.s | 800000.00 |
| 5 | WeighingScale (Electronic) | 25000.00 | 01 No.s | 25000.00 |
| 6 | Pigeon whole | 40000.00 | 02 No.s | 80000.00 |
| 7 | ICU Cots | 100000.00 | 05 No.s | 500000.00 |
| 8 | Dialyser Reprocessing system | 600000.00 | 02 No.s | 1200000.00 |
| | **Total** | | | **1,21,05,000.00** |

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಚರ್ಚಿಸಲಾಯಿತು. 2009–10ನೇ ಸಾಲಿನಲ್ಲಿ ಖರೀದಿಸಲಾಗಿದ್ದ ಉಪಕರಣಗಳಿಗೆ ರಿಪೇರಿ ವೆಚ್ಚವಾಗಿ ರೂ.8.00 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆಂದು ವೈದ್ಯಕೀಯ ಅಧೀಕ್ಷಕರು ಸಭೆಯಲ್ಲಿ ತಿಳಿಸಲಾಗಿ, ಡಯಾಲಿಸಿಸ್ ಯಂತ್ರಗಳು ರಿಪೇರಿ ಬರುತ್ತಿದೆ ಎಂಬ ಕಾರಣವನ್ನಿಟ್ಟುಕೊಂಡು ಹೊಸ 10 ಉಪಕರಣಗಳನ್ನು ರೂ.121.00 ಲಕ್ಷಗಳ ವೆಚ್ಚದಲ್ಲಿ ಖರೀದಿಸುವುದು ಸಮಂಜವಾಗಿರುವುದಿಲ್ಲವೆಂದು ತೀರ್ಮಾನಿಸಿ ಈ ಹಿಂದೆ ಉಪಕರಣ ಸರಬರಾಜು ಮಾಡಿದ ಕಂಪನಿಯವರನ್ನು ಕರೆಸಿ ಸದರಿ ಉಪಕರಣಗಳನ್ನು ದುರಸ್ಥಿ ಮಾಡಿಸಿ ಉಪಯೋಗಿಸಿಕೊಳ್ಳುವಂತೆ ವೈದ್ಯಕೀಯ ಅಧೀಕ್ಷಕರವರಿಗೆ ಸೂಚಿಸಲಾಯಿತು ಮತ್ತು ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 07

**ವಿಷಯ: 2022–23ನೇ ಸಾಲಿಗೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ ಸಂಬಂಧಿಸಿದಂತೆ ಇ–ಟೆಂಡರ್ ಕರೆಯುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಮತ್ತು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅವಶ್ಯಕವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ 2021–22ನೇ ಸಾಲಿನಲ್ಲಿ ಕೆ.ಟಿ.ಪಿ.ಪಿ ನಿಯಮಾನುಸಾರ ರೂ.125.00 ಲಕ್ಷಗಳ ವೆಚ್ಚದಲ್ಲಿ ಕರೆಯಲಾಗಿದ್ದ ಇ–ಟೆಂಡರ್ ಅವಧಿಯು ದಿನಾಂಕ:28–02–2022 ರಂದು ಮುಕ್ತಾಯಗೊಳ್ಳಲಿದೆ. 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆ ಪ್ರಯೋಗಾಲಯಗಳಿಗೆ ಅವಶ್ಯಕವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಮತ್ತು ಡಿಸ್ಕ್‌ಗಳ ಸರಬರಾಜಿಗೆ ವಿಭಾಗದ ಮುಖ್ಯಸ್ಥರುಗಳು ಬೇಡಿಕೆ ಪಟ್ಟಿ ಸಲ್ಲಿಸಿದ್ದು, ಸದರಿ ಬೇಡಿಕೆ ಪಟ್ಟಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. 2022–23ನೇ ಸಾಲಿಗೆ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್ ಡಿಸ್ಕ್‌ಗಳು ಮತ್ತು ವಿಆರ್‌ಡಿಎಲ್ ರಾಸಾಯನಿಕಗಳ ಸರಬರಾಜಿಗೆ ಒಟ್ಟು ಅಂದಾಜು ಮೊತ್ತ ರೂ.**138.64** ಲಕ್ಷಗಳಾಗಿದ್ದು ವಿವರ ಈ ಕೆಳಕಂಡಂತೆ ಇರುತ್ತದೆ.

1 ರಿಂದ 4 ರವರೆಗಿನ ವೆಚ್ಚ ರೂ. 114.64 ಲಕ್ಷಗಳನ್ನು ಸಂಸ್ಥೆಯ ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಬಿಡುಗಡೆಯಾಗುವ ಅನುದಾನದಿಂದ ಮತ್ತು ಕ್ರಮ ಸಂಖ್ಯೆ 5ರ ವೆಚ್ಚ ರೂ.24.00 ಲಕ್ಷಗಳನ್ನು ಕೇಂದ್ರ ಸರ್ಕಾರದಿಂದ ವಿ.ಆರ್.ಡಿ.ಎಲ್. ಯೋಜನೆಯಡಿ ಬಿಡುಗಡೆಯಾಗುವ ಅನುದಾನದಿಂದ ಭರಿಸಬಹುದಾಗಿರುತ್ತದೆ. ಸದರಿ ವಿಷಯದ ಬಗ್ಗೆ ಚರ್ಚಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಬಗ್ಗೆ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl.No. | Particulars | Approximate cost Rs. In Lakhs |
|---|---|---|
| 1 | Chemicals | 114.64 |
| 2 | Reagents Kits | |
| 3 | Disc | |
| 4 | Glass ware | |
| 5 | VRDL(Chemicals / Reagents/ Glass wares) | 24.00 |
| Total | | 138.64 |



... Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಪ್ರಯೋಗಾಲಯಗಳಿಗೆ ಅವಶ್ಯಕವಿರುವ ರಾಸಾಯನಿಕಗಳು, ಗ್ಲಾಸ್‌ವೇರ್‌ಗಳು, ರಿಏಜೆಂಟ್ಸ್ ಕಿಟ್ಸ್, ಡಿಸ್ಕ್‌ಗಳ ವೆಚ್ಚ ರೂ. 114.64 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಸಂಸ್ಥೆಗೆ ಬಿಡುಗಡೆಯಾಗುವ ಅನುದಾನದಿಂದ ಭರಿಸುವುದೆಂದು ಮತ್ತು ವಿಆರ್‌ಡಿಎಲ್ ರಾಸಾಯನಿಕಗಳ ವೆಚ್ಚ ರೂ.24.00 ಲಕ್ಷಗಳನ್ನು ಕೇಂದ್ರ ಸರ್ಕಾರದಿಂದ ವಿ.ಆರ್.ಡಿ.ಎಲ್. ಯೋಜನೆಯಡಿ ಬಿಡುಗಡೆಯಾಗುವ ಅನುದಾನದಿಂದ ಭರಿಸಲು ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.



HASSAN - 573 201

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 08

**ವಿಷಯ: 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಔಷಧಿಗಳು (Tablets and injections)ಸರಬರಾಜಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಟೆಂಡರ್ ಕರೆಯುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ 2022–23ನೇ ಸಾಲಿಗೆ ಅವಶ್ಯಕವಿರುವ ಔಷಧಿಗಳಿಗೆ (Tablets and injections) ವಿಭಾಗದ ಮುಖ್ಯಸ್ಥರುಗಳು ಬೇಡಿಕೆ ಪಟ್ಟಿ ಸಲ್ಲಿಸಿದ್ದು, ಸದರಿ ಬೇಡಿಕೆ ಪಟ್ಟಿಗೆ ಅನುಗುಣವಾಗಿ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ–ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ವಿಭಾಗದ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ 2022–23ನೇ ಸಾಲಿಗೆ ಔಷಧಿಗಳ ಸರಬರಾಜಿನ ಒಟ್ಟು ಅಂದಾಜು ವೆಚ್ಚ ರೂ.482.68 ಲಕ್ಷಗಳಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| Sl.No. | Particulars | Approximate cost Rs. In lakhs |
|---|---|---|
| 1 | Tablets | 238.30 |
| 2 | Injections | 244.38 |
| **Total** | | **482.68** |

ಮುಂದುವರೆದು 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿಗಳ ಅಂದಾಜು ವೆಚ್ಚ ರೂ.482.68 ಲಕ್ಷಗಳನ್ನು ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಭರಿಸಬಹುದಾಗಿರುತ್ತದೆ. ಸದರಿ ವಿಷಯದ ಬಗ್ಗೆ ಚರ್ಚಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಬಗ್ಗೆ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿಗಳ ಅಂದಾಜು ವೆಚ್ಚ ರೂ.482.68 ಲಕ್ಷಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಭರಿಸಲು ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 09

**ವಿಷಯ: 2022–23ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಡಯಾಲಿಸಿಸ್ ಔಷಧಿಗಳು, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಸರಬರಾಜಿಗೆ ಕೆ.ಟಿ.ಪಿ.ಪಿ. ನಿಯಮಾನುಸಾರ ಇ–ಟೆಂಡರ್ ಕರೆಯುವ ಬಗ್ಗೆ.**

*–*–*

**ಪ್ರಸ್ತಾವನೆ:**

ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ 2022–23ನೇ ಸಾಲಿಗೆ ಅವಶ್ಯಕವಿರುವ ಡಯಾಲಿಸಿಸ್ ಔಷಧಿಗಳು, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಸರಬರಾಜಿಗೆ ವಿಭಾಗದ ಮುಖ್ಯಸ್ಥರುಗಳು ಬೇಡಿಕೆ ಪಟ್ಟಿ ಸಲ್ಲಿಸಿದ್ದು, ಸದರಿ ಬೇಡಿಕೆ ಪಟ್ಟಿಗೆ ಅನುಗುಣವಾಗಿ ಕೆ.ಟಿ.ಪಿ.ಪಿ ಅಧಿನಿಯಮ ದನ್ವಯ ಇ-ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗಿರುತ್ತದೆ. ವಿಭಾಗದ ಮುಖ್ಯಸ್ಥರುಗಳು ಸಲ್ಲಿಸಿರುವ ಬೇಡಿಕೆ ಪಟ್ಟಿಗೆ ಅನುಗುಣವಾಗಿ 2022–23ನೇ ಸಾಲಿಗೆ ಡಯಾಲಿಸಿಸ್, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಸರಬರಾಜಿನ ಒಟ್ಟು ಅಂದಾಜು ವೆಚ್ಚ ರೂ.486.19ಲಕ್ಷಗಳಾಗಿರುತ್ತದೆ.

ಮುಂದುವರೆದು 2022–23 ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಡಯಾಲಿಸಿಸ್ ಔಷಧಿಗಳು, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಖರೀದಿಗೆ ಅಂದಾಜು ವೆಚ್ಚ ರೂ.486.19 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಭರಿಸಬಹುದಾಗಿರುತ್ತದೆ. ಸದರಿ ವಿಷಯದ ಬಗ್ಗೆ ಚರ್ಚಿಸಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಬಗ್ಗೆ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl.No. | Particulars | Approximate cost Rs. In Lakhs |
|---|---|---|
| 1 | Consumables | 290.71 |
| 2 | Suture Materials | 21.48 |
| 3 | Dialysis | 71.01 |
| 4 | Infusions and vaccines | 103.99 |
| **Total** | | **486.19** |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2022–23 ನೇ ಸಾಲಿಗೆ ಬೋಧಕ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಡಯಾಲಿಸಿಸ್ ಔಷಧಿಗಳು, ಸೂಚರ್ ಮೆಟಿರಿಯಲ್ಸ್ ಹಾಗೂ ಇತರೆ ವಸ್ತುಗಳ ಖರೀದಿಗೆ ಅಂದಾಜು ವೆಚ್ಚ ರೂ.486.19 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210–05–105–1–49 (103) ಅಡಿಯಲ್ಲಿ ಭರಿಸಲು ಒಪ್ಪಿ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 10

**ವಿಷಯ: 2021-22ನೇ ಸಾಲಿಗೆ ಬೋಧಕ ಆಸ್ಪತ್ರೆಗೆ ಅಗತ್ಯವಿರುವ ಔಷಧ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ಮಾನ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅನುಮತಿಯನ್ನು ಪಡೆದು ಕೆಟಿಪಿಪಿ ನಿಯಮಾನುಸಾರ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಿರುವುದನ್ನು ಅನುಮೋದಿಸುವ ಬಗ್ಗೆ.**

*-*-*

**ಪ್ರಸ್ತಾವನೆ:**

ಹಿಮ್ಸ್ ಬೋಧಕ ಆಸ್ಪತ್ರೆಗೆ ಬರುವ ರೋಗಿಗಳ ಚಿಕಿತ್ಸೆಗಾಗಿ ಅಗತ್ಯವಿರುವ ಔಷಧ ಮತ್ತು ಇತರೆ ಸಾಮಗ್ರಿಗಳನ್ನು ಪ್ರತಿ ವರ್ಷ ಅಂದಾಜು ರೂ.ಎಂಟರಿಂದ ಒಂಭತ್ತು ಕೋಟಿಗಳ ವೆಚ್ಚದಲ್ಲಿ ವಾರ್ಷಿಕ ಟೆಂಡರ್ ಮೂಲಕ ಸರಬರಾಜು ಪಡೆಯಲಾಗುತ್ತಿದೆ. ಮುಂದುವರೆದು 2020-21ನೇ ಸಾಲಿನಲ್ಲಿ ಕೋವಿಡ್-19 ಸೋಂಕು ಉಲ್ಬಣಗೊಂಡ ಹಿನ್ನೆಲೆಯಲ್ಲಿ ಹಾಗೂ ಸದರಿ ಸಮಯದಲ್ಲಿ ನಾನ್-ಕೋವಿಡ್ ರೋಗಿಗಳ ಸಂಖ್ಯೆಯು ಗಣನೀಯ ಇಳಿಕೆಗೊಂಡಿದ್ದರಿಂದ ಕೋವಿಡ್-19 ಚಿಕಿತ್ಸೆಗೆ ಅವಶ್ಯವಿದ್ದ ಔಷಧ ಮತ್ತು ಇತರೆ ಸಾಮಗ್ರಿಗಳನ್ನು ಮಾತ್ರವೇ ಸರಬರಾಜು ಪಡೆಯಲು ಕ್ರಮವಹಿಸಲಾಗಿರುತ್ತದೆ ಮತ್ತು ಕೋವಿಡ್-19 3ನೇ ಅಲೆಗೆ ಅವಶ್ಯವಿದ್ದ ಔಷಧ & ಇತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು 24ನೇ ಆರ್ಥಿಕ ಸಮಿತಿಯ ಅನುಮೋದನೆಯನ್ನು ಪಡೆದು, ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ಮಧ್ಯೆ ಕೋವಿಡ್-19 3ನೇ ಅಲೆಯು ವಿಳಂಬವಾಗಿದ್ದು, ಏಕಾಏಕಿ ನಾನ್-ಕೋವಿಡ್ ರೋಗಿಗಳ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳ ಕಂಡುಬಂದಿದ್ದು, ಸದರಿ ನಾನ್-ಕೋವಿಡ್‌ಗೆ ಸಂಬಂಧಿಸಿದ ಔಷಧ ಮತ್ತು ಇತರೆ ಪರಿಕರಗಳಲ್ಲಿ ಹಠಾತ್ತನೆ ಕೊರತೆಯುಂಟಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2021-22 ನೇ ಸಾಲಿನ ಸುಮಾರು 04 ತಿಂಗಳ ಅವಧಿಗೆ ನಾನ್-ಕೋವಿಡ್ ರೋಗಿಗಳ ಚಿಕಿತ್ಸೆಗೆ ತುರ್ತು ಅಗತ್ಯವಿರುವ ರೂ. 70.28 ಲಕ್ಷಗಳ ಮೌಲ್ಯದ ಔಷಧ ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಆರ್ಥಿಕ ಸಮಿತಿ ಸಭೆಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಮಾನ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರಿಗೆ ಏಕಕಡತದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆಯನ್ನು ಪಡೆದು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವುದನ್ನು ಮತ್ತು ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-05-105-1-49 (103) ಅಡಿಯಲ್ಲಿ ಭರಿಸಲು ಅನುಮೋದನೆಗಾಗಿ ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸರ್ಕಾರದ ಮಾನ್ಯ ಕಾರ್ಯದರ್ಶಿಗಳಿಂದ ಅನುಮೋದನೆ ಪಡೆದು ಅಲ್ಪಾವಧಿ ಇ-ಟೆಂಡರ್ ಕರೆದಿರುವುದನ್ನು ಒಪ್ಪಿ ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ 2210-05-105-1-49 (103) ಅಡಿಯಲ್ಲಿ ಭರಿಸುವುದೆಂದು ತೀರ್ಮಾನಿಸಲಾಯಿತು.

ನಿರ್ದೇಶಕರು

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 11

**ವಿಷಯ: ಸಂಸ್ಥೆಯ ಬೋಧಕ ಆಸ್ಪತ್ರೆಯ ರಕ್ತನಿಧಿ ವಿಭಾಗಕ್ಕೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.**

*–*–*

**ಪ್ರಸ್ತಾವನೆ:**

ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿದ್ದು ಸದರಿ ವಿಭಾಗದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ತ್ವರಿತಗತಿಯಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಅವಶ್ಯಕವಿರುವ ವೈದ್ಯಕೀಯ ಉಪಕರಣಗಳನ್ನು ಒದಗಿಸಿಕೊಡುವಂತೆ ಸಂಬಂಧಿಸಿದ ವಿಭಾಗದ ಮುಖ್ಯಸ್ಥರು ಬೇಡಿಕೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ರಕ್ತನಿಧಿ ವಿಭಾಗಕ್ಕೆ ಅಗತ್ಯವಿರುವ ಉಪಕರಣಗಳ ಅಂದಾಜು ವೆಚ್ಚ ರೂ.79,57,000–00ಗಳಾಗಿದ್ದು, ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49 (103)/ ಯೂಸರ್ಸ್ ನಿಧಿ ಅಡಿಯಲ್ಲಿ ಭರಿಸುವ ಬಗ್ಗೆ ಹಾಗೂ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl No | Details | Qty | Rate | Amount |
|---|---|---|---|---|
| 1 | Platelet Agitator with Platelet Incubator | 1 | 4,00,000-00 | 4,00,000-00 |
| 2 | Aphaeresis unit (Blood cell separator) | 1 | 29,00,000-00 | 29,00,000-00 |
| 3 | Fully automated Elisa instruments | 1 | 38,00,000-00 | 38,00,000-00 |
| 4 | Centrifuge | 1 | 42,000-00 | 42,000-00 |
| 5 | Hot air oven Digital | 1 | 25,000-00 | 25,000-00 |
| 6 | Elisa Reader with Washer | 1 | 1,50,000-00 | 1,50,000-00 |
| 7 | Donor Couch | 4 | 1,60,000-00 | 6,40,000-00 |
| | Total | | | 79,57,000-00 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರಕ್ತನಿಧಿ ವಿಭಾಗಕ್ಕೆ ಅಗತ್ಯವಿರುವ ಉಪಕರಣಗಳ ಅಂದಾಜು ವೆಚ್ಚ ರೂ.79,57,000–00ಗಳನ್ನು ಖರೀದಿಸಲು ಒಪ್ಪಿ ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210–05–105–1–49 (103)/ಎ.ಆರ್.ಎಸ್. ನಿಧಿ ಅಡಿಯಲ್ಲಿ ಭರಿಸುವುದೆಂದು ಹಾಗೂ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 12

**ವಿಷಯ: ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ 2022ನೇ ವರ್ಷಕ್ಕೆ ಅಗತ್ಯವಿರುವ ನಿಯತಕಾಲಿಕೆಗಳ ಸರಬರಾಜಿಗೆ ಇ-ಟೆಂಡರ್ ಕರೆಯುವ ಬಗ್ಗೆ.**

*-*-*

**ಪ್ರಸ್ತಾವನೆ:**

ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ಹಾಗೂ ಸ್ನಾತ್ತಕೋತ್ತರ ಪದವಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಮತ್ತು ಬೋಧಕರಿಗೆ 2022ನೇ ವರ್ಷಕ್ಕೆ 46 ಅಂತರಾಷ್ಟ್ರಿಯ ಹಾಗೂ 71 ರಾಷ್ಟ್ರಿಯ ನಿಯತಕಾಲಿಕೆಗಳು ಸೇರಿದಂತೆ ಒಟ್ಟು 117 ನಿಯತಕಾಲಿಕೆಗಳ ಸರಬರಾಜಿಗೆ ಅಂದಾಜು ವೆಚ್ಚ ರೂ.60.00 ಲಕ್ಷಗಳು **with out discount**. ವೆಚ್ಚವಾಗಲಿದ್ದು ನಿಯತಕಾಲಿಕೆಗಳನ್ನು ಸರಬರಾಜು ಮಾಡಿಕೊಡುವಂತೆ ವಿಭಾಗದ ಮುಖ್ಯಸ್ಥರು ಮನವಿ ಸಲ್ಲಿಸಿರುತ್ತಾರೆ. ಕೇಂದ್ರ ಗ್ರಂಥಾಲಯಕ್ಕೆ ಅಗತ್ಯವಿರುವ ನಿಯತಕಾಲಿಕೆಗಳನ್ನು KTPP Act 1999-2000ರಂತೆ ಇ-ಟೆಂಡರ್ ಮೂಲಕ ಖರೀದಿಸಲು ಟೆಂಡರ್ ಕರೆಯಲು ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ನಂತರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಖರೀದಿ ಸಮಿತಿ ಸಭೆಯಲ್ಲಿ ದರಸಂಧಾನ ನಡೆಸಿ ಎಲ್-1 ಬಿಡ್‌ದಾರರಿಗೆ ಸರಬರಾಜು ಆದೇಶ ನೀಡಲು 90 ದಿನಗಳ ಕಾಲವಕಾಶ ಬೇಕಾಗಿರುತ್ತದೆ ಹಾಗೂ ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 2210 ಯೋಜನೆ ಅಡಿ ಭರಿಸಬೇಕಾಗಿದ್ದು, ಸದರಿ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕೇಂದ್ರ ಗ್ರಂಥಾಲಯಕ್ಕೆ ಅಗತ್ಯವಿರುವ ನಿಯತಕಾಲಿಕೆಗಳ ವೆಚ್ಚವನ್ನು ಸಂಸ್ಥೆಯ ಯೂನಿವರ್ಸಿಟಿ ಖಾತೆಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸುವುದೆಂದು ಒಪ್ಪಿ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಕರೆಯುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 13

**ವಿಷಯ: ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 450 ಹಾಸಿಗೆಗಳ ಆಸ್ಪತ್ರೆ ಕಟ್ಟಡಕ್ಕೆ Pneumatic Chute system ಅಳವಡಿಸುವ ಬಗ್ಗೆ.**

**ಉಲ್ಲೇಖ:**1. ಸರ್ಕಾರದ ಆದೇಶ ಸಂಖ್ಯೆ:ಆಕುಕ34 ಕೆವಿಎಂ2019,ಬೆಂಗಳೂರು,ದಿ:02-02-2019.
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರ ಪತ್ರ ದಿನಾಂಕ:23.09.2021

*-*-*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆಗಳ ಸಾಮರ್ಥ್ಯದ ನೂತನ ಆಸ್ಪತ್ರೆಯ ಕಟ್ಟಡ ಕಾಮಗಾರಿಯು ಪ್ರಗತಿಯಲ್ಲಿದ್ದು ಹಂತದಲ್ಲಿದ್ದು, ಸದರಿ ಆಸ್ಪತ್ರೆಯ ರೋಗಿಗಳ ಚಿಕಿತ್ಸೆಗೆ ಅನುಕೂಲವಾಗುವಂತೆ ಆಧುನಿಕ ತಂತ್ರಜ್ಞದಂತೆ Pneumatic Chute system ಅಳವಡಿಸುವುದರಿಂದ ರೋಗಿಗಳ ರಕ್ತ ಹಾಗೂ ಇತರೆ ಮಾದರಿಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ರವಾನಿಸುವ ವ್ಯವಸ್ಥೆಯಾಗಿರುತ್ತದೆ. ಸದರಿ ವ್ಯವಸ್ಥೆಯನ್ನು ಅಳವಿಡಿಸಿಕೊಳ್ಳುವ ಬಗ್ಗೆ ದಿನಾಂಕ:29.03.2021 ರಂದು ನಡೆದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಹ ಚರ್ಚಿಸಲಾಗಿದ್ದು, ಈ ಬಗ್ಗೆ ಕ್ರಮಕೈಗೊಳ್ಳುವಂತೆ ದಿನಾಂಕ:17.07.2021 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರಿಗೆ ಪತ್ರ ಬರೆಯಲಾಗಿರುತ್ತದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರು ಈ ವ್ಯವಸ್ಥೆಯ ಐಟಂಗಳಿಗೆ ಲೋಕೋಪಯೋಗಿ ಇಲಾಖಾ ದರಪಟ್ಟಿಯಲ್ಲಿ ದರಗಳು ಲಭ್ಯವಿಲ್ಲದಿರುವುದರಿಂದ ಮಾರುಕಟ್ಟೆ ದರವನ್ನು ಪರಿಶೀಲಿಸಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಈ ವ್ಯವಸ್ಥೆಯನ್ನು 450 ಹಾಸಿಗೆಗಳ ಆಸ್ಪತ್ರೆಯ ಕಟ್ಟಡಕ್ಕೆ, ಒದಗಿಸಲು ಮಾರುಕಟ್ಟೆಯಲ್ಲಿ ಪರಿಶೀಲಿಸಿದಂತೆ ಎಂಟು ಹಂತಗಳಲ್ಲಿ ಅಳವಡಿಸಲು ಈ ರೀತಿಯ ಸೌಲಭ್ಯ ಒದಗಿಸುವ ಸರಬರಾಜುದಾರರಿಂದ ದರಗಳನ್ನು ಪಡೆಯಲಾಗಿ ಅದರಂತೆ ರೂ.166.60 ಲಕ್ಷಗಳ ಅಂದಾಜು ಆಗಲಿದ್ದು, ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳಬಹುದಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರಿಗೆ ದಿನಾಂಕ: 23-09-2020ರಂದು ಪತ್ರ ಬರೆದಿರುತ್ತಾರೆ.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ಹಿಮ್ಸ್ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 450 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯ ಕಟ್ಟಡಕ್ಕೆ, ರೋಗಿಗಳ ಚಿಕಿತ್ಸೆಗೆ ಅನುಕೂಲವಾಗುವಂತೆ Pneumatic chute system ಅಳವಡಿಸುವ ಕಾಮಗಾರಿಯ ಅನುಷ್ಠಾನದ ಅಂದಾಜು ಮೊತ್ತ ರೂ.166.00ಲಕ್ಷಗಳನ್ನು ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿಕೊಂಡು, ಆಡಳಿತಾತ್ಮಕ ಅನುಮೋದನೆಯೊಂದಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅಥವಾ ಈ ಸಂಸ್ಥೆಯ ಯೂಸರ್ಸ್ ನಿಧಿಯಿಂದ ಸಂಸ್ಥೆಯಲ್ಲಿ ಲಭ್ಯವಿರುವ ಇತರೆ ಸಿವಿಲ್ ಅಕೌಂಟ್ (ಲೆಕ್ಕ ಶೀರ್ಷಿಕೆಯ 4210–03–105–1–02–386"ರ ಅಡಿ)ಯಿಂದ ಭರಿಸುವ ಬಗ್ಗೆ, ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಹಿಮ್ಸ್ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ 450 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯ ಕಟ್ಟಡಕ್ಕೆ, ರೋಗಿಗಳ ಚಿಕಿತ್ಸೆಗೆ ಅನುಕೂಲವಾಗುವಂತೆ Pneumatic chute system ಅಳವಡಿಸುವ ಕಾಮಗಾರಿಯ ಅನುಷ್ಠಾನದ ಅಂದಾಜು ಮೊತ್ತ ರೂ.166.00ಲಕ್ಷಗಳನ್ನು ಪರಿಷ್ಕೃತ ಅಂದಾಜಿನಲ್ಲಿ ಅಳವಡಿಸಿಕೊಂಡು ಕೆ.ಟಿ.ಪಿ.ಪಿ ನಿಯಮಾನುಸಾರ ಕಾಮಗಾರಿ ಕೈಗೊಳ್ಳುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಯ ಎ.ಆರ್.ಎಸ್. ನಿಧಿ ಅಥವಾ ಇತರೆ ಸಿವಿಲ್ ಅಕೌಂಟ್ (ಲೆಕ್ಕ ಶೀರ್ಷಿಕೆಯ 4210–03–105–1–02–386"ರ ಅಡಿ ಭರಿಸುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 14

**ವಿಷಯ: ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ನರ್ಸ್ ವಸತಿಗೃಹ ಎ ಮತ್ತು ಬಿ ಬ್ಲಾಕ್‌ನ ಉಳಿತಾಯ ಮೊತ್ತದಲ್ಲಿ ಈ ಸಂಸ್ಥೆಯ ಶುಶ್ರೂಷಕರ ವಸತಿ ನಿಲಯಕ್ಕೆ ರಸ್ತೆ ಮತ್ತು ಡ್ರೈನೇಜ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.**

ಉಲ್ಲೇಖ: ಮಾನ್ಯಶಾಸಕರು, ಹಾಸನ ವಿಧಾನ ಸಭಾ ಕ್ಷೇತ್ರ, ಹಾಸನ ಇವರ ಪತ್ರ ದಿನಾಂಕ:25.10.2021.

*-*-*

**ಪ್ರಸ್ತಾವನೆ:**

ಈ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ನರ್ಸ್ ವಸತಿ ಗೃಹಗಳ (ಎ ಮತ್ತು ಬಿ ಬ್ಲಾಕ್‌ನ) ಕಾಮಗಾರಿಗಳು ಮುಗಿಯುವ ಹಂತದಲ್ಲಿದ್ದು, ಸದರಿ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ M/s.BSR Infratech India Ltd Bangaloreನ ಗುತ್ತಿಗೆದಾದರೊಂದಿಗೆ ಚರ್ಚಿಸಿದಾಗ ಸದರಿ ಕಾಮಗಾರಿಯಲ್ಲಿ ಸುಮಾರು 2.50ಕೋಟಿಗಳು ಉಳಿತಾಯವಾಗುತ್ತದೆಂದು ಗುತ್ತಿಗೆದಾರರು ತಿಳಿಸಿರುತ್ತಾರೆಂದು ಹಾಗೂ ಸದರಿ ಕಾಮಗಾರಿಯ ಉಳಿತಾಯ ಮೊತ್ತದಲ್ಲಿ ಹಿಮ್ಸ್ ಸಂಸ್ಥೆಯ ಆಸ್ಪತ್ರೆಯ ಆವರಣದಲ್ಲಿ ರಸ್ತೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯ ಕ್ರಮವಹಿಸಬೇಕಾಗಿ ಮಾನ್ಯ ಶಾಸಕರು–ಹಾಸನ ವಿಧಾನ ಸಭಾ ಕ್ಷೇತ್ರ, ಹಾಸನ ಇವರು ಪತ್ರದ ದಿನಾಂಕ:25.10.2021 ರಲ್ಲಿ ತಿಳಿಸಿರುತ್ತಾರೆ. ಸಂಸ್ಥೆಯ ಆವರಣದಲ್ಲಿ ಅವಶ್ಯಕ ರಸ್ತೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ತಗುಲುವ ಪಟ್ಟಿಯನ್ನು ಸಲ್ಲಿಸುವಂತೆ ದಿನಾಂಕ:29.10.2021 ರಂದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರಿಗೆ ಪತ್ರ ಬರೆಯಲಾಗಿತ್ತು. ಸದರಿಯವರು ದಿನಾಂಕ:18.11.2021ರಂದು ನರ್ಸ್ ವಸತಿ ಗೃಹಗಳಿಗೆ ಅವಶ್ಯಕವಿರುವ ರೋಡ್ ಮತ್ತು ಡ್ರೈನೇಜ್ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜುಪಟ್ಟಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರ ಮುಖಾಂತರ ಕೈಗೊಳ್ಳುವ ಬಗ್ಗೆ ಮತ್ತು ಸದರಿ ಕಾಮಗಾರಿಗಳ ಅಂದಾಜು ಮೊತ್ತವನ್ನು ನರ್ಸ್ ವಸತಿ ಗೃಹಗಳ (ಎ ಮತ್ತು ಬಿ ಬ್ಲಾಕ್‌ನ) ಕಾಮಗಾರಿಯಲ್ಲಿ ಉಳಿತಾಯವಾಗುವ ಮೊತ್ತದಲ್ಲಿ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂಗಳಲ್ಲಿ) |
|---|---|---|
| 01 | Concrete Road at Nurse Quarters | 3031601.00 |
| 02 | Drains at Nurse Quarters | 865368.21 |
| | **Total** | **38,96,970.00** |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದ್ಯಕ್ಕೆ ಈಕಾಮಗಾರಿಯನ್ನು ವಿಲೇ ಇಟ್ಟು ನರ್ಸ್ ವಸತಿ ಗೃಹಗಳ (ಎ ಮತ್ತು ಬಿ ಬ್ಲಾಕ್‌ನ) ಕಾಮಗಾರಿಗಳಲ್ಲಿ ಉಳಿತಾಯವಾಗುವ 2.50ಕೋಟಿಗಳ ಮೊತ್ತವನ್ನು ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅತ್ಯವಶ್ಯಕವಾಗಿರುವ Fire Protection ಕಾಮಗಾರಿಗೆ ಉಪಯೋಗಿಸಿಕೊಳ್ಳಲು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 15

**ವಿಷಯ: ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ಸುತ್ತ ಮತ್ತು ಕಾಲೇಜು ಕಟ್ಟಡದ ಮುಖ್ಯದ್ವಾರದಿಂದ ಬೋಧಕ ಆಸ್ಪತ್ರೆಯ ರಸ್ತೆಗೆ ರೋಗಿಗಳ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಬೆಳಕಿನ ವ್ಯವಸ್ಥೆಗೆ ವಿದ್ಯುತ್‌ದೀಪಗಳನ್ನು ಅಳವಡಿಸುವ ಬಗ್ಗೆ.**

ಉಲ್ಲೇಖ: ಸಹಾಯಕ ಕಾರ್ಯಪಾಲಕ ಇಂಜಿನಿಯರ್,ಆ.ಕು.ಕ ಇಲಾಖೆ,ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರ ಅಂದಾಜು ಪಟ್ಟಿ ದಿನಾಂಕ:20.11.2021.

*–*–*

ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ಸುತ್ತ ಮತ್ತು ಕಾಲೇಜು ಕಟ್ಟಡದ ಮುಖ್ಯದ್ವಾರದಿಂದ ಬೋಧಕ ಆಸ್ಪತ್ರೆಯ ರಸ್ತೆಗೆ ರೋಗಿಗಳು ಹಾಗೂ ಸಾರ್ವಜನಿಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳು ಸಂಚರಿಸಲು ಬೆಳಕಿನ ವ್ಯವಸ್ಥೆ ಕಲ್ಪಿಸಲು ವಿದ್ಯುತ್ ದೀಪಗಳನ್ನು ಅಳವಡಿಸುವ ತಗುಲುವ ಅಂದಾಜು ವೆಚ್ಚದ ಅಂದಾಜುಪಟ್ಟಿ ಸಲ್ಲಿಸುವಂತೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರನ್ನು ಕೋರಲಾಗಿತ್ತು. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ. ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರು ದಿನಾಂಕ:20.11.2021ರಂದು ಬೋಧಕ ಆಸ್ಪತ್ರೆಯ ಸುತ್ತ ಮತ್ತು ಕಾಲೇಜು ಕಟ್ಟಡದ ಮುಖ್ಯದ್ವಾರದಿಂದ ಬೋಧಕ ಆಸ್ಪತ್ರೆಯ ರಸ್ತೆಗೆ ಬೆಳಕಿನ ವ್ಯವಸ್ಥೆ ಮಾಡಲು ವಿದ್ಯುತ್ ದೀಪಗಳನ್ನು ಅಳವಡಿಸಲು 3 ವಿಧದ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ.

ಸದರಿ 3 ರೀತಿಯ ಕಾಮಗಾರಿಗಳಲ್ಲಿ ಸೂಕ್ತ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮತ್ತು ಸದರಿ ಕಾಮಗಾರಿಗಳನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆ.ಕು.ಕ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರ ಮುಖಾಂತರ ಕೈಗೊಳ್ಳಲು ಬಗ್ಗೆ ಹಾಗೂ ಸದರಿ ಕಾಮಗಾರಿಗಳ ಅಂದಾಜು ಮೊತ್ತವನ್ನು ಎ.ಆರ್.ಎಸ್. ನಿಧಿಯಿಂದ ಭರಿಸುವ ಬಗ್ಗೆ ಆರ್ಥಿಕ ಸಮಿತಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಪರಿಮಾಣ | ಅಂದಾಜು ಮೊತ್ತ (ರೂಗಳಲ್ಲಿ) |
|---|---|---|---|
| 01 | Providing street light Poles facility around teaching Hospital & Main Entrance to HIMS, Hassan. (548 ಮೀಟರ್) **(WITHOUT SOLAR FACILITY)** | 41 | 27,85,000.00 |
| 02 | Providing Mild Steel street light poles with solar Electrical facility around teaching Hospital & Main Entrance to HIMS, Hassan. (548 ಮೀಟರ್) **(M S POLE with solar )** | 41 | 40,45,000.00 |

| | | | |
|---|---|---|---|
| 03 | Providing ornamental street light poles with solar electrical facility around teaching Hospital & Main Entrance to HIMS, Hassan.(548 ಮೀಟರ್) **(WITH CAST IRON ORNAMENTAL POLE )** | 41 | 63,00,000.00 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಕಾಲೇಜಿನ ಹಾಗೂ ಬೋಧಕ ಆಸ್ಪತ್ರೆಯ ಸುತ್ತಮುತ್ತ ರಾತ್ರಿ ಸಮಯದಲ್ಲಿ ಸೂಕ್ತ ಬೆಳಕಿನ ವ್ಯವಸ್ಥೆ ಇಲ್ಲದೆ ರೋಗಿಗಳಿಂದ ಸಾರ್ವಜನಿಕರಿಂದ ಹಾಗೂ ವಿದ್ಯಾರ್ಥಿಗಳಿಂದ ದೂರುಗಳು ಬರುತ್ತಿರುವುದನ್ನು ಗಮನಿಸಿ ಎಲ್.ಇ.ಡಿ ಬೆಳಕಿನ ವ್ಯವಸ್ಥೆಯ ಕಾಮಗಾರಿಗಳನ್ನು ಅಂದಾಜು ಮೊತ್ತ ರೂ.27.85 ಲಕ್ಷಗಳಲ್ಲಿ ತ್ವರಿತವಾಗಿ GEM ಮೂಲಕ ಅನುಷ್ಠಾನಗೊಳಿಸುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 16

**ವಿಷಯ: ಸಂಸ್ಥೆಯ ಬೋಧಕ ಆಸ್ಪತ್ರೆ ಮುಂಭಾಗ ಮತ್ತು ಕಾಲೇಜಿನ ಮುಂಭಾಗದ ಆವರಣದ ಗಾರ್ಡನ್‌ಗಳಿಗೆ ಸುಸಜ್ಜಿತ ಚೈನ್‌ಲಿಂಕ್ ಮೆಶ್ ಫೆನ್ಸಿಂಗ್ ಅಳವಡಿಸುವ ಬಗ್ಗೆ.**

*-*-*

**ಪ್ರಸ್ತಾವನೆ:**

ಸಂಸ್ಥೆಯ ಬೋಧಕ ಆಸ್ಪತ್ರೆಯ ಮುಂಭಾಗದ ಆವರಣ ಮತ್ತು ಕಾಲೇಜಿನ ಮುಂಭಾಗದ ಆವರಣದ ಗಾರ್ಡನ್‌ಗಳಲ್ಲಿ ಬೇಲಿ ಇಲ್ಲದಿರುವುದರಿಂದ ಹಚ್ಚ ಹಸಿರಿನಿಂದ ಕೂಡಿರುವ ಗಾರ್ಡನ್‌ಗಳ ಒಳಗೆ ದನ-ಕರುಗಳು, ಹಾಗೂ ಇತರೆ ಪ್ರಾಣಿಗಳು ಗಾರ್ಡನ್ ಒಳಗೆ ಬಂದು ಹೂವಿನ ಗಿಡಗಳು, ಅಲಂಕಾರಿಕ ಗಿಡಗಳು, ಫೌಂಟೆನ್, ಇನ್ನಿತರ ವಸ್ತುಗಳನ್ನು ಹಾಳು ಮಾಡುತ್ತಿದ್ದು, ಇವುಗಳಿಂದ ಗಾರ್ಡನ್ ಹಾಳಾಗುತ್ತಿರುತ್ತದೆ. ಸಂಸ್ಥೆಯ ಕಾಯಕಲ್ಪ ಯೋಜನೆಯನ್ನು ಯಶಸ್ವಿಯಾಗಿಸುವ ಸಲುವಾಗಿ ಸಂಸ್ಥೆಯ ಬೋಧಕ ಆಸ್ಪತ್ರೆಯ ಮುಂಭಾಗದ ಗಾರ್ಡನ್ ಆವರಣವನ್ನು ಸುರಕ್ಷಿತವಾಗಿ ಹಾಗೂ ಸ್ವಚ್ಛವಾಗಿ ಇಟ್ಟುಕೊಳ್ಳಲು ಚೈನ್‌ಲಿಂಕ್ ಮೆಶ್ ಫೆನ್ಸಿಂಗ್ ಅಳವಡಿಸಿಕೊಳ್ಳಬೇಕಾಗಿದ್ದು, ಅಂದಾಜು ರೂ. 12.27 ಲಕ್ಷಗಳಾಗಲಿದ್ದು ಸದರಿ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| ಕ್ರಮ ಸಂಖ್ಯೆ | ವಿವರ | ದರ | ಪರಿಮಾಣ | ಒಟ್ಟು ಮೊತ್ತ |
|---|---|---|---|---|
| 1 | ಸಂಸ್ಥೆಯ ಬೋಧಕ ಆಸ್ಪತ್ರೆಯ ಮುಂಭಾಗದ ಗಾರ್ಡ್‌ನ್‌ಗೆ 4 ಅಡಿ ಎತ್ತರದ ಚೈನ್‌ಲಿಂಕ್ ಮೆಶ್ ಫೆನ್ಸಿಂಗ್ | 200/sqf | 2600sft | 6,13,600.00 |
| 2 | ಕಾಲೇಜು ಮುಂಭಾಗದ ಗಾರ್ಡ್‌ನ್‌ಗೆ 4 ಅಡಿ ಎತ್ತರದ ಚೈನ್‌ಲಿಂಕ್ ಮೆಶ್ ಫೆನ್ಸಿಂಗ್ | 200/sqf | 2600sft | 6,13,600.00 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಎರಡು ಸ್ಥಳಗಳಿಗೆ ಚೈನ್‌ಲಿಂಕ್ ಮೆಶ್ ಫೆನ್ಸಿಂಗ್ ಅಳವಡಿಸಲು ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಕರೆದು ಸದರಿ ವೆಚ್ಚವನ್ನು ಎ.ಆರ್.ಎಸ್. ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.



Finance Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 17

**ವಿಷಯ: ದಿವಂಗತ ಹೊನ್ನೇಗೌಡ ಶುಶ್ರೂಷಾಧಿಕಾರಿ ಹಿಮ್ಸ್, ಹಾಸನ ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮೊತ್ತವನ್ನು ಮರುಪಾವತಿಸಲು ಆರ್ಥಿಕ ಸಮಿತಿ ಸಭೆ/ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವಂತೆ ಸರ್ಕಾರದಿಂದ ಬಂದಿರುವ ಪತ್ರದ ಬಗ್ಗೆ.**

ಉಲ್ಲೇಖ: 1. ಈ ಕಛೇರಿ ಪತ್ರ ಸಂಖ್ಯೆ:ಹಿಮ್ಸ್/ವೈ.ವೆ.ಮ/08/2020-21 ದಿನಾಂಕ:31.03.2021.

2. ಸರ್ಕಾರದ ಪತ್ರ ಸಂಖ್ಯೆ:ಎಂಇಡಿ/118/ಕೆವಿಎಂ/2021 ದಿನಾಂಕ: 08.09.2021.

3. ಸಂಸ್ಥೆಯ 22 ನೇ ಆರ್ಥಿಕ ಸಮಿತಿ ಸಭಾ ನಡವಳಿ ದಿನಾಂಕ: 22.11.2019

*-*-*

**ಪ್ರಸ್ತಾವನೆ:**

ಸಂಸ್ಥೆಯ ಕರ್ತವ್ಯನಿರತ ಈ ಕೆಳಕಂಡ ನೌಕರರ ವೈದ್ಯಕೀಯ ಚಿಕಿತ್ಸಾ ವೆಚ್ಚವು ರೂ.1.00 ಲಕ್ಷಗಳಿಗಿಂತ ಮೇಲ್ಪಟ್ಟಿದ್ದು, ಚಿಕಿತ್ಸಾ ವೆಚ್ಚವು ರೂ.1.00 ಲಕ್ಷಗಳಿಗಿಂತ ಅಧಿಕವಾದಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯುವಂತೆ ಉಲ್ಲೇಖ (3) ರಲ್ಲಿ ಸೂಚಿಸಿರುವುದರಿಂದ, ಸದರಿ ನೌಕರರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮೂಲ ಪ್ರತಿಗಳ ಪರಿಶೀಲನೆ ಮತ್ತು ಅನುಮೋದನೆಗಾಗಿ ಉಲ್ಲೇಖ (1) ರನ್ವಯ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಸದರಿಯವರು ಚಿಕಿತ್ಸೆ ಪಡೆದಿರುವ Aster CMI Hospital Bangalore ಆಸ್ಪತ್ರೆಯು ಸರ್ಕಾರದಿಂದ ಮಾನ್ಯತೆ ಪಡೆದಿರುವ ಆಸ್ಪತ್ರೆಯಾಗಿರುವುದರಿಂದ, ಸಿ.ಜಿ.ಹೆಚ್.ಎಸ್ ದರಪಟ್ಟಿಯಂತೆ ಪರಿಶೀಲಿಸಿಕೊಂಡು ಮುಂದಿನ ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಮರುಪಾವತಿಸಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ. ಸರ್ಕಾರದ ನಿರ್ದೇಶನದಂತೆ ಸಿ.ಜಿ.ಹೆಚ್.ಎಸ್ ದರಪಟ್ಟಿಯಂತೆ ಪರಿಶೀಲಿಸಿ ಅರ್ಹ ಮೊತ್ತ ರೂ.2,19,090/- ಗಳನ್ನು ದಿವಂಗತ. ಹೊನ್ನೇಗೌಡ ಇವರ ಪತ್ನಿ ಶ್ರೀಮತಿ ದಾಕ್ಷಾಯಿಣಿ ಬಿ.ಬಿ ಶುಶ್ರೂಷಾಧಿಕಾರಿ ಹಿಮ್ಸ್, ಹಾಸನ ಇವರಿಗೆ ಪಾವತಿಸಲು ಆರ್ಥಿಕ ಸಮಿತಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದರು.

| ಕ್ರಸ | ಹೆಸರು ಮತ್ತು ಹುದ್ದೆ | ನೌಕರರಿಗೆ ರೋಗಿಯ ಸಂಬಂಧ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಖಾಯಿಲೆಯ ವಿವರ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|---|
| 01 | ದಾಕ್ಷಾಯಿಣಿ ಬಿ.ಬಿ ಶುಶ್ರೂಷಾಧಿಕಾರಿ | ಪತಿ(ದಿವಂಗತ ಹೊನ್ನೇಗೌಡ) ಆಸ್ಟರ್ ಸಿ.ಎಂ.ಐ ಆಸ್ಪತ್ರೆ, ಬೆಂಗಳೂರು | ಲಿವರ್ ಸಮಸ್ಯೆ | 1,88,108.00<br>1,38,975.00 | 1,33,973.00<br>85,117.00 |
| | | | | 3,27,083.00 | 2,19,090.00 |

**ತೀರ್ಮಾನ:**

ಸದರಿ ವಿಷಯದ ಬಗ್ಗೆ ಚರ್ಚಿಸಲಾಯಿತು ಚಿಕಿತ್ಸಾ ವೆಚ್ಚವು ಸಿ.ಜಿ.ಹೆಚ್.ಎಸ್ ದರಪಟ್ಟಿಯಂತೆ ಪರಿಶೀಲಿಸಿರುವುದರಿಂದ ಅರ್ಹಮೊತ್ತ ರೂ.2,19,090/-ಗಳನ್ನು ದಿವಂಗತ ಹೊನ್ನೇಗೌಡ ಶುಶ್ರೂಷಾಧಿಕಾರಿ ಹಿಮ್ಸ್, ಹಾಸನ ಇವರ ಪತ್ನಿಯಾದ ಶ್ರೀಮತಿ. ದಾಕ್ಷಾಯಿಣಿ ಬಿ.ಬಿ ಶುಶ್ರೂಷಾಧಿಕಾರಿ, ಹಿಮ್ಸ್, ಹಾಸನ ಇವರಿಗೆ ಲೆಕ್ಕ ಶೀರ್ಷಿಕೆ 2210(103)ರಡಿಯಲ್ಲಿ ಪಾವತಿಸುವುದೆಂದು ತೀರ್ಮಾನಿಸಲಾಯಿತು.

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 18

**ವಿಷಯ: ಕೋವಿಡ್–19 2ನೇ ಅಲೆಯ ಲಾಕ್‌ಡೌನ್ ಸಮಯದಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡದ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರ ಮತ್ತು ಬೋಧಕ ಆಸ್ಪತ್ರೆಯ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರಗಳ ಬಾಡಿಗೆಯಲ್ಲಿ ರಿಯಾಯ್ತಿ ಕೋರಿರುವ ಬಗ್ಗೆ .**

*–*–*

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರ ಹಾಗೂ ಬೋಧಕ ಆಸ್ಪತ್ರೆಯ ಸೆಲ್ಲಾರ್‌ನಲ್ಲಿರುವ ಉಪಹಾರ ಮಂದಿರಗಳಿಗೆ ಮೂರು ವರ್ಷಗಳ ಅವಧಿಗೆ ಉಪಹಾರ ಮಂದಿರ ನಡೆಸಲು ಇ–ಟೆಂಡರ್ ಕರೆಯಲಾಗಿದ್ದು, ಕಾಲೇಜು ಕಟ್ಟಡದ ಉಪಹಾರ ಮಂದಿರಕ್ಕೆ ರೂ.21,000/–ಗಳು ಹಾಗೂ ಬೋಧಕ ಆಸ್ಪತ್ರೆಯ ಉಪಹಾರ ಮಂದಿರಕ್ಕೆ ರೂ.30,150/–ಗಳಂತೆ ಬಾಡಿಗೆಗೆ ನಿಗದಿಯಾಗಿದ್ದು, ಎಲ್–1 ಟೆಂಡರ್‌ದಾರರಿಗೆ ಕಾರ್ಯದೇಶ ನೀಡಲಾಗಿರುತ್ತದೆ.

ಶ್ರೀ.ಸಾಯಿನಾಥ ಹೋಟೇಲ್ (ಕಾಲೇಜು ಕಟ್ಟಡದ ಉಪಹಾರ ಮಂದಿರ) ಮತ್ತು ಶ್ರೀ.ಶಿವಕುಮಾರ್ (ಬೋಧಕ ಆಸ್ಪತ್ರೆಯ ಉಪಹಾರ ಮಂದಿರ) ರವರು ಮನವಿ ಸಲ್ಲಿಸಿ, ದೇಶದ್ಯಾಂತ ಕೊರೊನಾ ವ್ಯಾಪಕವಾಗಿ ಹಬ್ಬುತ್ತಿದ್ದ ಹಿನ್ನೆಲೆಯಲ್ಲಿ ಕೊರೊನಾ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ಸಂಬಂಧ ರಾಜ್ಯ ಸರ್ಕಾರವು ಕಠಿಣ ನಿಯಮಗಳನ್ನು ವಿಧಿಸಿ ಲಾಕ್‌ಡೌನ್ ಜಾರಿಗೊಳಿಸಿದ್ದರಿಂದ ಉಪಹಾರ ಮಂದಿರಗಳನ್ನು ತೆರೆದಿರುವುದಿಲ್ಲ. ಹಾಗೂ ಬೋಧಕ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿದ್ದರಿಂದ ಉಪಹಾರ ಮಂದಿರಕ್ಕೆ ಜನಗಳು ಬಾರದೇ ಇರುವುದರಿಂದ, ದಿನನಿತ್ಯದ ವ್ಯಾಪಾರ ಕುಸಿದು ನಷ್ಟ ಅನುಭವಿಸಿರುವ ಹಿನ್ನೆಲೆಯಲ್ಲಿ ಸದರಿ ಅವಧಿಗೆ ಬಾಡಿಗೆ ಪಾವತಿಸಲು ಕಷ್ಟಕರವಾಗಿದ್ದು, ಸದರಿ ಬಾಡಿಗೆಯಲ್ಲಿ ರಿಯಾಯ್ತಿ ನೀಡುವಂತೆ ಕೋರಿರುತ್ತಾರೆ.

ಮುಂದುವರೆದು ಶ್ರೀ.ಸಾಯಿನಾಥ ಹೋಟೇಲ್ ಕಾಲೇಜು ಕಟ್ಟಡದ ಉಪಹಾರ ಮಂದಿರ ಇವರಿಂದ ರೂ.1,26,000.00 (ಏಪ್ರಿಲ್–2021 ರಿಂದ ಸೆಪ್ಟಂಬರ್–2021)ಮತ್ತು ಶ್ರೀ.ಶಿವಕುಮಾರ್, ಬೋಧಕ ಆಸ್ಪತ್ರೆಯ ಉಪಹಾರ ಮಂದಿರ ಇವರಿಂದ ರೂ.1,80,900.00(ಏಪ್ರಿಲ್ 2021 ರಿಂದ ಸೆಪ್ಟಂಬರ್–2021)ಗಳು ಬಾಕಿ ಇರುತ್ತದೆ. ಸದರಿ ಗುತ್ತಿಗೆದಾರರು ಬಾಡಿಗೆಯಲ್ಲಿ ರಿಯಾಯಿತಿ ನೀಡುವಂತೆ ಕೋರಿರುವ ಮನವಿಯ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

**ತೀರ್ಮಾನ:**

ಶ್ರೀ.ಸಾಯಿನಾಥ ಹೋಟೇಲ್ (ಕಾಲೇಜು ಕಟ್ಟಡದ ಉಪಹಾರ ಮಂದಿರ) ಮತ್ತು ಶ್ರೀ.ಶಿವಕುಮಾರ್ (ಬೋಧಕ ಆಸ್ಪತ್ರೆಯ ಉಪಹಾರ ಮಂದಿರ) ರವರು ಸಲ್ಲಿಸಿದ್ದ ಮನವಿ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿ ಆಸ್ಪತ್ರೆ ಕಟ್ಟಡವನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿದ ಹಿನ್ನೆಲೆಯಲ್ಲಿ ಉಪಹಾರ ಮಂದಿರಗಳನ್ನು ಕೋವಿಡ್ –19 ನಿಮಿತ್ತ ಅನಿರೀಕ್ಷಿತವಾಗಿ ಮುಚ್ಚಬೇಕಾದ ಕಾರಣದಿಂದ, ಸದರಿ ಸಂಸ್ಥೆಗಳು ಯಾವುದೇ ಚಟುವಟಿಕೆ ನಡೆಸಲು ಸಾಧ್ಯವಾಗದೆ ನಷ್ಟ ಅನುಭಿವಿಸಿರುವುದರಿಂದ ಏಪ್ರಿಲ್ –2021 ರಿಂದ ಸೆಪ್ಟಂಬರ್–2021ರವರೆಗಿನ ಬಾಡಿಗೆಯನ್ನು ಪೂರ್ಣ ವಿನಾಯಿತಿ ನೀಡುವುದೆಂದು ತೀರ್ಮಾನಿಸಲಾಯಿತು.



Finance Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 19

**ವಿಷಯ: ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಮತ್ತು ಬಿಲ್ಲಿಂಗ್ ಕೌಂಟರ್‌ಗಳಿಗೆ ಅವಶ್ಯಕವಿರುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಇ-ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.**

*-*-*

ಪ್ರಸ್ತಾವನೆ:

ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಿದ್ದು ವಾರ್ಡ್‌ಗಳಲ್ಲಿ ಬಿಲ್ಲಿಂಗ್ ಕೌಂಟರ್‌ಗಳಿಗೆ ಮತ್ತು ವಿವಿಧ ವಿಭಾಗಗಳಿಗೆ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳ ಅಗತ್ಯವಿದ್ದು, ಅಗತ್ಯವಿರುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಒದಗಿಸಿಕೊಡುವಂತೆ ವೈದ್ಯಕೀಯ ಅಧೀಕ್ಷಕರು, ಬೋಧಕ ಆಸ್ಪತ್ರೆ, ಹಿಮ್ಸ್, ಹಾಸನರವರು ಮನವಿ ಸಲ್ಲಿಸಿರುತ್ತಾರೆ. ಸದರಿ ಬಿಲ್ಲಿಂಗ್ ಕೌಂಟರ್‌ಗಳಿಗೆ ಮತ್ತು ವಿವಿಧ ವಿಭಾಗಗಳಿಗೆ ಅಗತ್ಯವಿರುವ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಅಂದಾಜು ವೆಚ್ಚ ರೂ. 32,50,000-00ಗಳಾಗಿದ್ದು, ಸದರಿ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2210-05-105-1-49(103)/ಯೂಸರ್ಸ್ ನಿಧಿ ಅಡಿಯಲ್ಲಿ ಭರಿಸುವ ಬಗ್ಗೆ ಹಾಗೂ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| Sl no | Details | Qty | Estimated Cost per unit | Amount |
|---|---|---|---|---|
| 1 | Computers | 50 | 50,000-00 | 25,00,000-00 |
| 2 | Printers | 50 | 15,000-00 | 7,50,000-00 |
| | **Total** | | | **32,50,000-00** |

## ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಸಂಸ್ಥೆಯಲ್ಲಿ ಇ-ಆಸ್ಪತ್ರೆ ಅನುಷ್ಠಾನಕ್ಕಾಗಿ 50 ಕಂಪ್ಯೂಟರ್‌ಗಳು ಹಾಗೂ 25 ಪ್ರಿಂಟರ್‌ಗಳನ್ನು ತ್ವರಿತವಾಗಿ GEM ಮೂಲಕ ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಎ.ಆರ್.ಎಸ್. ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.



Officer

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## ಅಜೆಂಡಾ ಕ್ರಮ ಸಂಖ್ಯೆ: 20

**ವಿಷಯ: ಸಂಸ್ಥೆಯ ಕಾಲೇಜು ವಿಭಾಗದ ಉಪನ್ಯಾಸ ಕೊಠಡಿಗಳಿಗೆ ಸ್ಮಾರ್ಟ್‌ಕ್ಲಾಸ್ ಸೌಲಭ್ಯವನ್ನು ಅಳವಡಿಸಿಕೊಳ್ಳುವ ಬಗ್ಗೆ.**

*-*-*

**ಪ್ರಸ್ತಾವನೆ:**

ಸಂಸ್ಥೆಯ ಕಾಲೇಜು ವಿಭಾಗದ ಉಪನ್ಯಾಸ ಕೊಠಡಿಗಳನ್ನು ಈಗಾಗಲೇ ಸುಸಜ್ಜಿತ ಗೊಳಿಸಲಾಗಿರುತ್ತದೆ. ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತೆ ಉಪನ್ಯಾಸಕ ಕೊಠಡಿಗಳಿಗೆ ಸ್ಮಾರ್ಟ್‌ಕ್ಲಾಸ್ ಸೌಲಭ್ಯವನ್ನು ಅಳವಡಿಸಿಕೊಡುವಂತೆ ಪ್ರಾಂಶುಪಾಲರು ಮನವಿ ಸಲ್ಲಿಸಿರುತ್ತಾರೆ. ಸದರಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಅಂದಾಜು ರೂ.26.35 ಲಕ್ಷ ವೆಚ್ಚವಾಗಲಿದ್ದು ವಿವರ ಈ ಕೆಳಕಂಡಂತಿರುತ್ತದೆ.

ಮುಂದುವರೆದು ಸದರಿ ಸ್ಮಾಟ್‌ಕ್ಲಾಸ್ ತಂತ್ರಜ್ಞಾನ ಅಳವಡಿಸಿಕೊಳ್ಳಲು ಅಂದಾಜು ವೆಚ್ಚ ರೂ.26,35,000-00ಗಳಾಗಿದ್ದು, ಸದರಿ ವೆಚ್ಚವನ್ನು ಸಂಸ್ಥೆಯ ಯೂನಿವರ್ಸಿಟಿ ಖಾತೆಯಲ್ಲಿ ಭರಿಸುವ ಬಗ್ಗೆ ಹಾಗೂ ಕೆ.ಟಿ.ಪಿ.ಪಿ ಅಧಿನಿಯಮದನ್ವಯ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಲಹೆಗಾರರು ಸಭೆಯ ಮುಂದೆ ಮಂಡಿಸಿದರು.

| ಕ್ರ ಸಂ | ವಿವರ | ಪ್ರಮಾಣ | ದರ | ಮೊತ್ತ |
|---|---|---|---|---|
| 1 | Interactive Flat touch panel display 98`` | 1 | 15,00,000-00 | 15,00,000-00 |
| 2 | Smart Interactive projector with white board | 2 | 2,80,000-00 | 5,60,000-00 |
| 3 | Digital podium with interactive touch panel and Accessories | 1 | 3,25,000-00 | 3,25,000-00 |
| 4 | Pen Display tab 24`` with touch sensitive | 2 | 1,25,000-00 | 2,50,000-00 |
| | | | **Total** | **26,35,000-00** |

## ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೊದಲನೇ ಹಂತದಲ್ಲಿ Interactive Flat touch panel display 98`` ರೂ.15.00 ಲಕ್ಷಗಳ ವೆಚ್ಚದಲ್ಲಿ .ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸುವುದೆಂದು ಹಾಗೂ ಸದರಿ ವೆಚ್ಚವನ್ನು ಸಂಸ್ಥೆಯ ಯೂನಿವರ್ಸಿಟಿ ಖಾತೆಯಲ್ಲಿರುವ ಅನುದಾನದಲ್ಲಿ ಭರಿಸುವುದೆಂದು ತೀರ್ಮಾನಿಸಲಾಯಿತು.

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ.

ನಿರ್ದೇಶಕರು ಹಾಗೂ ಡೀನ್,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ. ಹಾಗೂ ಸದಸ್ಯರು,
ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ.

ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಸರ್ಕಾರದ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಅಧ್ಯಕ್ಷರು,
ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ.



Finance Officer

ಹಾಸನ